

## ಆರೋಗ್ಯ ವಿಮೆ ಸುರಕ್ಷಾ ಕವಚ

ಬದಲಾದ ಜೀವನಶೈಲಿ, ಧಾವಂತದ ಬದುಕಿನಲ್ಲಿ ಆರೋಗ್ಯವಂತರಾಗಿರಬೇಕು ಎಂದಾದರೆ ಬಹಳ ಕಷ್ಟಪಡುವ ಪರಿಸ್ಥಿತಿ ಬಂದಿದೆ. ಅತ್ಯಾಧುನಿಕ ಸವಲತ್ತುಗಳು ಬಂದಿದ್ದರೂ ಈ ಕ್ಷೇತ್ರದಲ್ಲಿ ಇನ್ನೂ ಸಾಕಷ್ಟು ಮಾರ್ಪಾಡು ಆಗಬೇಕಾಗಿದೆ. ಹೊಸ ವರ್ಷದಲ್ಲಿ ಇನ್ನಷ್ಟು ತಂತ್ರಜ್ಞಾನ ಬರಲಿದೆ. ಇದರಿಂದ ಬೆಂಗಳೂರು ಮಾತ್ರವಲ್ಲ ಹೊರಗೆ, ದೂರ ದೂರ ಇರುವ ರೋಗಿಗಳಿಗೂ ಅನುಕೂಲ ಆಗುತ್ತದೆ, ಮುಂಬರುವ ವರ್ಷಗಳಲ್ಲಿ ಗುಣಮಟ್ಟದ ಆರೋಗ್ಯ ಸೇವೆ ಜನರಿಗೆ ಸಿಗಬೇಕು. ರೋಗ ಪತ್ತೆ, ನಿವಾರಣೆ ಎಲ್ಲದರಲ್ಲೂ ಮತ್ತಷ್ಟು ಸುಧಾರಣೆ, ಅಭಿವೃದ್ಧಿಯನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಆರೋಗ್ಯ ಸೇವೆ, ಚಿಕಿತ್ಸೆ ವೆಚ್ಚ ದುಬಾರಿಯಾಗುತ್ತಿರುವ ಹಿನ್ನೆಲೆಯಲ್ಲಿ ಮುಂದಿನ ವರ್ಷದಲ್ಲಿ ಎಲ್ಲರೂ ಆರೋಗ್ಯ ವಿಮೆ ಮಾಡಿಸಿಕೊಳ್ಳಬೇಕು. ಇದರಿಂದ ಯಾವುದೇ ಚಿಕಿತ್ಸೆ ಪಡೆಯಲೂ ಜನ ಹಿಂಜರಿಯಲ್ಲ. ಸ್ವಂತ ಖರ್ಚು ಮಾಡಿಕೊಂಡು ಚಿಕಿತ್ಸೆ ಪಡೆಯೋದಕ್ಕೆ ರೋಗಿಗಳು ಮುಂದೆ ಬರಲ್ಲ. ವಿಮೆ ಇದ್ದರೆ ಆಸ್ಪತ್ರೆಗಳಿಗೆ ಬರ್ತಾರೆ. ವಿಮೆ ಹೊಂದುವುದು ಎಲ್ಲರ ಸಂಕಲ್ಪ ಆಗಬೇಕು.

**-ಡಾ. ಶರಣ್ ಪಾಟೀಲ್,**
ಸ್ಪರ್ಶ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ, ಬೆಂಗಳೂರು

ಹಾಗೂ ಸೋಶಿಯಲ್ ಮೀಡಿಯಾ ಸಮಯವನ್ನು ಇಳಿಸುತ್ತೇನೆ (20%); ಕೆಲಸದ ಒತ್ತಡ ಇಳಿಸಿಕೊಳ್ಳುತ್ತೇನೆ (19%); ಹಣಕಾಸು ವೆಚ್ಚ ಕಮ್ಮಿ ಮಾಡಿಕೊಳ್ಳುತ್ತೇನೆ (19%).

ನಮ್ಮ ದೇಶವಾಸಿಗಳ ನಿರ್ಧಾರ ಹೇಗಿರುತ್ತದೆ? ಗೊತ್ತಿಲ್ಲ, ಏಕೆಂದರೆ ಅಂಥ ದತ್ತಾಂಶ ಸಂಗ್ರಹ, ವಿಶ್ಲೇಷಣೆ ನಡೆದಂತಿಲ್ಲ. (ನಮ್ಮಲ್ಲಿ ದತ್ತಾಂಶ ಸಂಗ್ರಹಣೆಯ ಕೆಲಸ ತೀರಾ ಕಳಪೆ. ರೇಬಿಸ್ ರೋಗದಿಂದ ಪ್ರತಿವರ್ಷ ಸಾಯುವವರೆಷ್ಟು ಎಂದು ಹುಡುಕಿ ನೋಡಿ: ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜಿನ ಪ್ರಕಾರ 18 ಸಾವಿರ ಇದೆ. ಆದರೆ 2022ರಲ್ಲಿ ಕೇವಲ 307 ಜನ ಗತಿಸಿದರೆಂದು ಕೇಂದ್ರ ಆರೋಗ್ಯ ಸಚಿವರು ಸಂಸತ್ತಿನಲ್ಲಿ ಕಳೆದ ಜುಲೈ ತಿಂಗಳ ಅಧಿವೇಶನದಲ್ಲಿ ಹೇಳಿದ್ದರು.) ಹೊಸವರ್ಷದ ನಿರ್ಧಾರಗಳ ಕುರಿತು ಹೇಳುವುದಾದರೆ, ನಾವೂ ಪಾಶ್ಚಿಮಾತ್ಯರ ಹೆಜ್ಜೆಯನ್ನೇ ಹೆಚ್ಚಾಗಿ ಅನುಸರಿಸುವುದರಿಂದ ನಮ್ಮಲ್ಲೂ ಅದೇ ಮಾದರಿಯಲ್ಲೇ ಇದ್ದೀತು. 'ನಾನು' 'ನನ್ನ' ಸ್ವಂತದ ಸುಧಾರಣೆಯ ಬಗ್ಗೆ ಏನೆಲ್ಲ ಮಾಡಲಿದ್ದೇನೆ ಎಂದು ಘೋಷಿಸಿಕೊಳ್ಳುವುದು.

ಅಷ್ಟಾದರೆ ಸಾಕೆ? ನಮ್ಮ ನಿಲುವನ್ನು ಸ್ವಲ್ಪ ಎತ್ತರಿಸಿಕೊಳ್ಳಲು ಸಾಧ್ಯವೆ? ಸಮಾಜಕ್ಕೆ ಏನಾದರೂ ಕೊಡುಗೆ ನೀಡುವತ್ತ ನನ್ನ ನಿರ್ಧಾರ ಏನು ಎಂದು ನಾನು ಬಹಿರಂಗ ಹೇಳಿಕೊಳ್ಳಬಹುದೆ? ಏನೂ ಬಡಾಯಿ ಕೊಚ್ಚಿಕೊಳ್ಳದೆ ತಮ್ಮ ಪಾಡಿಗೆ ತಾವು ಲೋಕಹಿತದ ಕೆಲಸಗಳಲ್ಲಿ ತೊಡಗಿಕೊಳ್ಳುವ ಜನ ನಮ್ಮಲ್ಲಿ ಅನೇಕರಿದ್ದಾರೆ. ಆದರೂ 'ಸಾಮಾಜಿಕ ಕೆಲಸಗಳ ಮಟ್ಟಿಗೆ ನನ್ನ ಹೊಸವರ್ಷದ ನಿರ್ಧಾರ ಹೀಗಿದೆ' ಎಂದು ಹೇಳಿಕೊಂಡರೆ ತಪ್ಪೇನು? ಬಹಿರಂಗ ಘೋಷಣೆ ಒಳ್ಳೆಯದೇ ಅಲ್ಲವೆ?

'ಅಮೆರಿಕದವರೇ ಅಂಥ ಕೆಲಸಗಳಿಗೆ ಆದ್ಯತೆ ಕೊಟ್ಟಿಲ್ಲವೆಂದರೆ ನಾನ್ಯಾಕೆ ಕೊಡಲಿ?' ಎಂಬ ತಗಾದೆಯನ್ನು ನೀವು ಎತ್ತಬಲ್ಲಿರಿ, ಗೊತ್ತು. ಆದರೆ ಅಲ್ಲಿ ಜನಸಾಮಾನ್ಯರು ಯಾರೂ ರಸ್ತೆ ಚರಂಡಿಗೆ ಕಸ ಬಿಸಾಕುವುದಿಲ್ಲ. ಆಸ್ಪತ್ರೆಯ ಔಷಧಗಳನ್ನು ಖಾಸಗಿ ಕ್ಲಿನಿಕ್ಕಿಗೆ ಸಾಗಿಸುವುದಿಲ್ಲ. ರಸ್ತೆ ನಿಯಮ ಉಲ್ಲಂಘಿಸುವುದಿಲ್ಲ. ಅಲ್ಲಿ ಸಾಮಾಜಿಕ ಸ್ವಾಸ್ಥ್ಯಕ್ಕೆಂದೇ ನಿಯೋಜಿತವಾದ ಶಿಕ್ಷಣ, ಆರೋಗ್ಯ, ಸಂಚಾರ, ವಿದ್ಯುತ್ತು–ನೀರು ಸರಬರಾಜು, ಮಾಲಿನ್ಯ ನಿಯಂತ್ರಣ ಸಂಸ್ಥೆಗಳು ಸಾಕಷ್ಟು ದಕ್ಷತೆಯಿಂದ ಕೆಲಸ ಮಾಡುತ್ತವೆ. ನಮ್ಮ ಸ್ಥಿತಿ ಬೇರೆಯೇ ಇದೆ. ನಮ್ಮನ್ನು ನಾವು 'ವಿಶ್ವಗುರು' ಎಂದು ಘೋಷಿಸಿಕೊಂಡಿದ್ದೇವೆ. ಚಂದ್ರಲೋಕ, ಮಂಗಳಲೋಕದತ್ತ ದೃಷ್ಟಿ ನೆಟ್ಟಿದ್ದೇವೆ, ಐದು ಟ್ರಿಲಿಯನ್ ಏಕಾನಮಿಯತ್ತ ಬುಲೆಟ್ ಟ್ರೇನ್ ಹೊರಡಿಸಿದ್ದೇವೆ. ಆದರೆ ವಿಶ್ವದ ನೂರು ಅತ್ಯುತ್ತಮ ವಿಶ್ವವಿದ್ಯಾಲಯಗಳಲ್ಲಿ ಒಂದೂ ನಮ್ಮದಿಲ್ಲ. ಪರಿಸರ ಪ್ರಜ್ಞೆ, ನಾಗರಿಕ ಶಿಸ್ತುಪಾಲನೆ, ಮಹಿಳಾ ರಕ್ಷಣೆ, ಮಕ್ಕಳ ಆರೋಗ್ಯ – ಯಾವ ಕ್ಷೇತ್ರದಲ್ಲಿ ನೋಡಿದರೂ ಜಾಗತಿಕ ಸೂಚ್ಯಂಕಗಳಲ್ಲಿ ನಮ್ಮದು ಅತಿ ಕಳಪೆ ಸ್ಥಾನ. ಇಲ್ಲಿ ಬೀದಿನಾಯಿಗಳಿಗೆ ಮಕ್ಕಳು ಜೀವ ತೆರುತ್ತವೆ. ಆಸ್ಪತ್ರೆಯ ತಿಪ್ಪೆಯಲ್ಲಿ ಹೆಣ್ಣುಭ್ರೂಣ ಬಿದ್ದಿರುತ್ತದೆ. ಕಾಡಿನ ಜಿಂಕೆಗಳು ಪ್ಲಾಸ್ಟಿಕ್ ತಿಂದು ಒದ್ದಾಡಿ ಸಾಯುತ್ತವೆ. ಇತರ ಸಂಗತಿ ಹಾಗಿರಲಿ, ಈಚೆಗೆ ಬೆಳಗಾವಿಯ ಬಳಿಯ ವಂಟಮೂರಿಯ ಒಬ್ಬ ಮಹಿಳೆಯನ್ನು 13 ಕೇಡಿಗಳು ಬೆತ್ತಲೆಗೊಳಿಸಿ ಬಡಿಯುತ್ತಿದ್ದಾಗ 50–60 ಜನರು ಮೂಕಪ್ರೇಕ್ಷಕರಾಗಿ ನಿಂತಿದ್ದರು. ಇಂಥ



## ಅಂಬೇಡ್ಕರ್ ಮಾರ್ಗದಲ್ಲಿ...

ಈ ನೆಲದಲ್ಲಿ ಸಹನೆ, ಸಾಮರಸ್ಯ, ಸಹಿಷ್ಣುತೆ ಎದ್ದು ನಿಂತರೆ ದ್ವೇಷಪೂರಿತವಾದದ್ದು ಯಾವುದೂ ಖಂಡಿತ ಉಳಿಯಲಾರದು. ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತಿಪಾದಿಸಿದ ಸ್ವಾತಂತ್ರ್ಯ, ಸಮಾನತೆ, ಸಹೋದರತೆಯ ಮನೋಭಾವ ನಮ್ಮ ದೇಶವನ್ನು ಕಾಪಾಡಬಲ್ಲವು. ಈ ನಿಟ್ಟಿನಲ್ಲಿಯೇ ನಮ್ಮ ಹೊಸವರ್ಷದ ಸಂಕಲ್ಪದ ಹೆಜ್ಜೆಗಳನ್ನು ಇಡಬೇಕಾಗಿದೆ. ಈ ಆಶಯಗಳ ಮೂರು ಬಾಹುಗಳು ಒಂದಾದರೆ ಮಾತ್ರ ಈ ದೇಶ ಉಳಿಯುತ್ತದೆ.

**-ಗಂಗಪ್ಪ ತಳವಾರ,** ಲೇಖಕ, ಅಧ್ಯಾಪಕ

'ಸಾಮೂಹಿಕ ಹೇಡಿತನ ಯಾಕೆ ಬಂತೊ?' ಎಂದು ಹೈಕೋರ್ಟ್ ನ್ಯಾಯಪೀಠವೇ ಕಳಕಳಿಯನ್ನು ವ್ಯಕ್ತಪಡಿಸಿತು.

ಅಂಥ ಹೇಡಿತನವನ್ನು ಕೊಡವಿ ಹಾಕಿ ನಾವು ಮೇಲೇಳಬೇಕಲ್ಲವೆ? ಸಾಮೂಹಿಕವಾಗಿ ಮೇಲೇಳುವುದು ತುಸು ದೂರದ ಮಾತು. ವ್ಯಕ್ತಿಗತವಾಗಿ ಸಮಾಜಕ್ಕೆ ಏನನ್ನಾದರೂ ಕೊಡುವ ಮನಸ್ಸಿದ್ದರೆ ಅದರಲ್ಲಿ ಎರಡು ಬಗೆ ಇವೆ: 'ನಾನು' ಒಬ್ಬಂಟಿಯಾಗಿ ಮಾಡುವುದು ಒಂದು ವಿಧ. ನನ್ನೊಂದಿಗೆ ಐದಾರೆಂಟೇ ಪುಟ್ಟ ಗುಂಪನ್ನು ಕಟ್ಟಿಕೊಂಡು ತೋಳೇರಿಸುವುದು ಇನ್ನೊಂದು ವಿಧ.

ಒಬ್ಬಂಟಿಯಾಗಿ ಮಾಡುವುದಾದರೆ: ಒಂದೇ ಚೊಂಬು ನೀರಲ್ಲಿ ದ್ವಿಚಕ್ರವಾಹನವನ್ನೂ, ಅರ್ಧ ಬಕೆಟ್ ನೀರಲ್ಲಿ ಇಡೀ ಕಾರನ್ನೂ ಸ್ವಚ್ಛಗೊಳಿಸಿ, ಅಕ್ಕಪಕ್ಕದ ಮಕ್ಕಳಿಗೆ ಡೆಮೊ ಕೊಡುತ್ತೇನೆ. ಒಬ್ಬನೇ ಒದ್ದೆ ಬಟ್ಟೆ ಹಿಡಿದು ಹೋಗಿ ರಸ್ತೆಫಲಕದ ಮೇಲೆ ಅಂಟಿಸಿದ ಜಾಹೀರಾತು ಪತ್ರವನ್ನು ಕಿತ್ತು ಸ್ವಚ್ಛ ಮಾಡಿ ಬರುತ್ತೇನೆ. ತೀರ ದುಃಸ್ಥಿತಿಯಲ್ಲಿರುವ ಮಾಹಿತಿ ಫಲಕದ ಚಿತ್ರ ತೆಗೆಯುತ್ತೇನೆ. ಗಣ್ಯರು ಕಳೆದ ವರ್ಷಗಳಲ್ಲಿ ನೆಟ್ಟುಹೋದ ಗಿಡಗಳ ತಾಣಕ್ಕೆ ಹೋಗಿ ಅವುಗಳ ಇಂದಿನ ಸ್ಥಿತಿಯ ಚಿತ್ರ ಸಂಗ್ರಹಿಸುತ್ತೇನೆ. ದಾನ ಕೊಡಬಲ್ಲವರಿಂದ ಪುಸ್ತಕಗಳನ್ನು ಸಂಗ್ರಹಿಸಿ ಶಾಲೆಯ ಗ್ರಂಥಾಲಯಕ್ಕೆ ನೀಡುತ್ತೇನೆ. ಸಾರ್ವಜನಿಕ ಹೊಣೆಗೇಡಿತನದ ಉದಾಹರಣೆಗಳ ಪಟ್ಟಿ ತಯಾರಿಸುತ್ತೇನೆ. ಕಸದ ತಿಪ್ಪೆಗೆ ಬೆಂಕಿ ಹಚ್ಚಲು ಪೌರಕಾರ್ಮಿಕರಿಗೆ ಅನುಮತಿ ನೀಡಿದ ಹೆಲ್ತ್ ಇನ್‌ಸ್ಪೆಕ್ಟರ್ ವಿರುದ್ಧ ಲಾಯರ್ ಮಿತ್ರನಿಗೆ ಹೇಳಿ ಒಂದು ಸಣ್ಣ ದಾವೆ ಹೂಡುತ್ತೇನೆ. ಸಾಧ್ಯವಾದಷ್ಟೂ ಹೆಚ್ಚು ಸರಕಾರಿ ಇಲಾಖೆಗಳ ವೆಬ್‌ಸೈಟ್‌ಗಳನ್ನು ಪರಿಶೀಲಿಸಿ, ವರ್ಷಗಟ್ಟಲೆ ಕಾಲದಿಂದ ಅಪ್‌ಡೇಟ್ ಆಗಿರದ ಮಾಹಿತಿಗಳ ಬಗ್ಗೆ ಆಯಾ ಇಲಾಖೆಗೆ, ಪತ್ರಿಕೆಗಳಿಗೆ ತಿಳಿಸುತ್ತೇನೆ. ಪತ್ರಿಕೆಗಳನ್ನು ರದ್ದಿಗೆ ಕೊಡುವ ಮುನ್ನ, ಜಗಕಲ್ಯಾಣದ ಅಪರೂಪದ ವರದಿಗಳನ್ನು ಕತ್ತರಿಸಿ ಅವುಗಳದ್ದೇ ಕ್ಲಿಪ್‌ಬುಕ್ ತಯಾರಿಸಿ ಶಾಲೆಗೆ ದಾನ ಕೊಡುತ್ತೇನೆ. ಪತ್ರಿಕೆಗಳು ಪ್ರಕಟಿಸುವ 'ವರ್ಷದ ಕನ್ನಡಿಗ', 'ಮಾದರಿ ವ್ಯಕ್ತಿ', 'ಚೇಂಜ್ ಮೇಕರ್ಸ್' ಇತ್ಯಾದಿಗಳ ಇಡೀ ಪುಟವನ್ನು ಫಲಕಕ್ಕೆ ಅಂಟಿಸಿ ಶಾಲೆಗಳಿಗೆ ಕೊಡುತ್ತೇನೆ. ಇತರರಿಗೆ ಮಾದರಿ ಆಗಬಲ್ಲ ಉತ್ತಮ ಕೆಲಸ ಎಲ್ಲೇ